O.S. 05/2013 DW-1

ದಿನಾಂಕಃ 28.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

2 ರಿಂದ 6ನೇ ಪ್ರತಿವಾದಿಗಳು ನಮ್ಮ ಕುಟುಂಬದವರೇ ಎಂದರೆ ಸರಿ. ಸರ್ವೆ ನಂ.16 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. 4 ಎಕರೆ ಜಮೀನು ಚೆಕ್ಕುಬಂದಿ ಪೂಃ ಶಿರಾ ರಸ್ತೆ. ಪಶ್ಚಿಮ-ಉತ್ತರಃ ಉಳಿಕೆ ಜಮೀನು ದಃ ರಾಮಪ್ಪರವರ ಜಮೀನು, ಈ ಚೆಕ್ಕುಬಂದಿ ಮಧ್ಯೆಯಿರುವ ಜಮೀನನ್ನು ವಾದಿಗೆ ಕ್ರಯದ ಕರಾರನ್ನು 3,00,000/- ಕ್ಕೆ ಮಾಡಿಕೊಟ್ಟಿದ್ದು ಅದೇ ದಿನ 1,62,000/- ನಗದು ಹಣ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ.1 ಕ್ಕೆ ನಾನು ಮತ್ತು 2 ರಿಂದ 6 ನೇ ಪ್ರತಿವಾದಿಗಳು ಸಹಿ ಮಾಡಿದ್ದೇವೆ ಎಂದರೆ ಸಾಲ ಮಾಡಿಸಿಕೊಡುತ್ತೇವೆಂದು ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ರಂತೆ ಕ್ರಯಪತ್ರ ಪಡೆದುಕೊಳ್ಳಲು ವಾದಿಯು ಅನೇಕಬಾರಿ ಕೇಳಿದರು ಸಹ ನಾವು ನಿರಾಕರಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯು ನಮಗೆ ಮೋಸ ಮಾಡಿದ ಬಗ್ಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಿಪಿ.1 ರ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ತಿಳಿಸಿರುವಂತೆ ಜಮೀನಿನ ಬೆಲೆ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ಪ್ರಕಾರ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಸಂಬಂಧ ಡಿಕ್ರಿಯಾಗಿರುವ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಲು ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.